ಸಾಕ್ಷಿಗೆ ಕ್ರಮಬದ್ದವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು 1 ನೇ ಪ್ರತಿವಾದಿ ಪರ ವಕೀಲರಾದ ಶ್ರೀ. ಇ. ಎ ರವರಿಂದ:

ನನಗೆ ಓದಲು ಬರೆಯಲು ಬರುತ್ತದೆ. ನಾನು ಪಿಯುಸಿ ವರೆಗೆ ವಿದಾಭ್ಯಾಸ ಮಾಡಿದ್ದೇನೆ. ನನಗೆ ಈ ದಾವೆಯ ಬಗ್ಗೆ ಎಲ್ಲಾ ವಿಚಾರ ಗೊತ್ತಿದೆ. ನನಗೆ ವಾದಪತ್ರ ಮತ್ತು ವಾದಿಗಳು ಸಲ್ಲಿಸಿದ ದಾಖಲೆಗಳ ಬಗ್ಗೆ ಗೊತ್ತಿದೆ. ದಾವಾ ಸ್ವತ್ತಿನ ಬಗ್ಗೆ ಬೇರೆ ವಾಜ್ಯ ಇರುವ ವಿಚಾರ ಗೊತ್ತಿದೆ. ವಾದಿಗಳು ವಾದ ಪತ್ರ ದಲ್ಲಿ ನನ್ನ ಬಗ್ಗೆ ಹೇಳಿರುವ ವಿಚಾರಗಳು ನಿಜವಾಗಿರುತ್ತದೆ. ವಾದ ಪತ್ರದಲ್ಲಿ ವಾದಿಗಳನ್ನು ಬಿಟ್ಟು ದಾವಾ ಸ್ವತ್ತುಗಳ ಬಗ್ಗೆ ನಾನೊಬ್ಬನೇ ಯಾವುದೇ ಅಧಿಕಾರ ಇಲ್ಲದೇ ವ್ಯವಹಾರ ಮಾಡಿದ್ದೇನೆ ಎಂದು ಹೇಳಿರುವುದು ನಿಜವಾಗಿರುತ್ತದೆ. ಅಸಲು ದಾವೆ ಸಂ. 97/2003 ರ ದಾವೆಯ ಬಗ್ಗೆ ನನಗೆ ಗೊತ್ತಿದೆ. ಸದರಿ ದಾವೆ ನಿರ್ದಿಷ್ಟ ಪರಿಹಾರ ಕೋರಿ ಹಾಕಿದ ದಾವೆ ಎಂದರೆ ಸರಿ. ಸದರಿ ದಾವೆ ಯನ್ನು ಸಲ್ಲಿಸಿದ ಡಾ: ಕೆ ವಿಶ್ವನಾಥ್ ರವರಿಗೆ ಬರೆದುಕೊಟ್ಟ ಕ್ರಯದ ಕರಾರಿಗೆ ಈ ದಾವೆಯ ವಾದಿಗಳು ಸಹಿ ಹಾಕಿರಲಿಲ್ಲ. ಡಾ: ಕೆ ವಿಶ್ವನಾಥ್ ರವರಿಗೆ ಬರೆದುಕೊಟ್ಟ ಕ್ರಯದ ಕರಾರಿಗೆ ನಾನ್ನೊಬ್ಬನೇ ಸಹಿ ಹಾಕಿದ್ದೇ. ಡಾ: ಕೆ ವಿಶ್ವನಾಥ್ ರವರಿಂದ ನಾನು ಸ್ವಲ್ಪ ಹಣ ಪಡೆದುಕೊಂಡಿದ್ದೆ. ಆ ಹಣವನ್ನು ನಾನು ಅವರಿಗೆ ಹಿಂತಿರುಗಿಸಿರಲಿಲ್ಲ. ಅಸಲು ದಾವೆ ಸಂ. 97/2003 ರಲ್ಲಿ ನಾನು ಪ್ರತಿವಾದ ಪತ್ರ ಸಲ್ಲಿಸಿದ್ದೆ. ಸದರಿ ಪ್ರತಿವಾದ ಪತ್ರದಲ್ಲಿ ನಾನು ಡಾ: ಕೆ ವಿಶ್ವನಾಥ್ ಹೇಳಿದ್ದು ಸುಳ್ಳು ಎಂದು ಹೇಳಿದ್ದೆ. ಈ ದಾವೆಯಲ್ಲೂ ನಾನು ಪ್ರತಿವಾದ ಪತ್ರ ಸಲ್ಲಿಸಿದ್ದೇನೆ. ಈ ದಾವೆಯಲ್ಲಿ 2 ನೇ ಪ್ರತಿವಾದಿ ಜೊತೆ

ವಾದಿಗಳು ಮತ್ತು ನಾನು ಸೇರಿ ವ್ಯವಹಾರ ಮಾಡಿಕೊಂಡಿರುವ ಬಗ್ಗೆ ಹೇಳಿರುವುದು ನಿಜ ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ. ಈ ದಾವೆಯಲ್ಲಿ ನಾನು ಮತ್ತು ವಾದಿಗಳು ದಾವಾ ಸ್ವತ್ತಿನ ಬಗ್ಗೆ ಮಾಡಿರುವ ವ್ಯವಹಾರಗಳ ಬಗ್ಗೆ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ವಾದಿಗಳು ಸಲ್ಲಿಸಿದ ದಾಖಲೆಗಳನ್ನು ನಾನೇ ಅವರಿಗೆ ಒದಗಿಸಿದ್ದೆ ಎಂದರೆ ಸರಿಯಲ್ಲ. ನಿಪಿ 21 ರಿಂದ 23 ನನ್ನ ದಾಖಲೆಗಳು ಎಂದರೆ ಸರಿ. ನಿಪಿ 21 ರಿಂದ 23 ರ ದಾಖಲೆಗಳಲ್ಲಿ ಹೇಳಿರುವ ವಿಚಾರಗಳು ನಿಜ ಅಲ್ಲವಾ ಎಂದರೆ ಹೌದು ಎಂದು ಸಾಕ್ಷಿ ನುಡಿಯುತ್ತಾರೆ. ನಿಪಿ 22 ರಲ್ಲಿ ಅಧಿಕಾರ ಪತ್ರವನ್ನು ರದ್ದು ಪಡಿಸಿದ ಬಗ್ಗೆ ಹೇಳಿದ್ದು ಯಾವ ಅಧಿಕಾರ ಪತ್ರವನ್ನು ರದ್ದು ಪಡಿಸಿದ್ದರೋ ಅದರ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ. ಸದರಿ ಅಧಿಕಾರ ಪತ್ರದ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಬಹುದಾ ಎಂದರೆ ಸಾಕ್ಷಿಯು ಅದು ನನ್ನ ಬಳಿ ಇಲ್ಲ ಎಂದು ನುಡಿಯುತ್ತಾರೆ. ಡಾ: ವಿಶ್ವನಾಥ್ ರವರ ಜೊತೆ ನಾನೊಬ್ಬನೇ ವ್ಯವಹಾರ ಮಾಡಿದ್ದಂತೆ ಈ ದಾವೆಯ 2 ನೇ ಪ್ರತಿವಾದಿ ಜೊತೆ ನಾನೊಬ್ಬನೇ ಪ್ರತ್ಯೇಕ ವ್ಯವಹಾರ ಮಾಡಿದ್ದೇ ಎಂದರೆ ಸರಿಯಲ್ಲ. ನಿಪಿ 21 ಮತ್ತು 22 ರ ದಾಖಲೆಗಳು ನಾನೂಬ್ಬನೇ 2 ನೇ ಪ್ರತಿವಾದಿಯೊಂದಿಗೆ ಮಾಡಿಕೊಂಡ ವ್ಯವಹಾರಗಳ ಬಗ್ಗೆ ದಾಖಲೆಗಳು ಎಂದರೆ ಸಾಕ್ಷಿಯು ನಾನೊಬ್ಬನೇ ಏನೂ ವ್ಯವಹಾರ ಮಾಡಿಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತುಗಳ ಬಗ್ಗೆ ನಾನೊಬ್ಬನೇ ವ್ಯವಹಾರ ಮಾಡುತ್ತೇನೆ ಎಂದು ವಾದಿಗಳು ನನ್ನ ಮೇಲೆ ನಂಬಿಕೆ ಇಲ್ಲದೆ ನನ್ನನ್ನು ಪ್ರತಿವಾದಿಯನ್ನಾಗಿ ಮಾಡಿದ್ದಾರೆ ಎಂದರೆ ನಿಜ.

ದಿಃ **14.03.2006** ರಂದು ಈ ದಾವೆಯಲ್ಲಿ ಈ ದಾವೆಯ ಪಕ್ಷಗಾರರು ಯಥಾಸ್ಥಿತಿ ಕಾಯ್ದುಕೊಳ್ಳಲು ಆದೇಶ ವಾಗಿತ್ತು ಎಂದರೆ ಸರಿ. ದಿಃ **14.03.2006** ರಿಂದ ಇಂದಿನವರೆಗೂ ನಾನಾಗಲೀ ವಾದಿಗಳಾಗಲೀ ಸದರಿ ಆದೇಶವನ್ನು ಉಲ್ಲಂಘನೆ ಮಾಡಿಲ್ಲ ಎಂದರೆ ಸರಿ.

ದಾವಾ ಸ್ವತ್ತು ಖಾಲಿ ಜಮೀನು ಎಂದರೆ ವ್ಯವಸಾಯದ ಜಮೀನು ಎಂದು ಸಾಕ್ಷಿ ನುಡಿಯುತ್ತಾರೆ. ದಿಃ **14.03.2006** ರಿಂದ ಇಂದಿನವರೆಗೂ ನಾನಾಗಲೀ, **1** ನೇ ಪ್ರತಿವಾದಿಯಾಗಲಿ ದಾವಾ ಸ್ವತ್ತುಗಳಲ್ಲಿ ಏನೂ ಮಾಡಿಲ್ಲ ಎಂದರೆ ಸಾಕ್ಷಿಯು ನಾನು ಮತ್ತು ವಾದಿಗಳು ವ್ಯವಸಾಯ ಮಾಡುತ್ತಿದ್ದೇವೆ ಎಂದು ನುಡಿಯುತ್ತಾರೆ. ನಾವು ಯಥಾಸ್ಥಿತಿ ಕಾಪಾಡಿಕೊಳ್ಳಬೇಕು ಎಂಬ ಆದೇಶವನ್ನು ಉಲ್ಲಂಘನೆ ಮಾಡಿದ್ದೇವೆ ಎಂದರೆ ಏನು ಮಾಡಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ಭೂಮಿ ಮೇಲೆ ಹೋಗಬಾರದು ಎಂಬ ಆದೇಶ ಇರಲಿಲ್ಲ ಎಂದು ನುಡಿಯುತ್ತಾರೆ. ಜಮೀನು ಭೂ ಪರಿವರ್ತನೆ ಆಗಿದೆ ಎಂದರೆ ಸರಿ. **2006** ರಲ್ಲಿ ದಾವಾ ಸ್ವತ್ತಿನಲ್ಲಿದ್ದ ಶೆಡ್ಡನ್ನು **1** ನೇ ಪ್ರತಿವಾದಿ ಆಸ್ತಿ ಖರೀದಿಸಿದ ನಂತರ ಒಡೆದು ಹಾಕಿದ್ದರು ಎಂದರೆ ಸರಿ. ಸಾಕ್ಷಿಯು ಪುನಃ ಅಕ್ರಮ ಪ್ರವೇಶ ಮಾಡಿ ಒಡೆದು ಹಾಕಿದ್ದರು ಎಂದು ನುಡಿಯುತ್ತಾರೆ. ಪೊಲೀಸ್ ಠಾಣೆಗೆ ದೂರು ಕೊಟ್ಟಿದ್ದೇ ಎಂದು ನುಡಿಯುತ್ತಾರೆ. ಸದರಿ ಜಮೀನಿನಲ್ಲಿ ಲೇ ಔಟ್ ಮಾಡಲು ಲೇ ಔಟ್ ಪ್ಲಾನ್ ಅನುಮೋದನೆ ಗೊಂಡಿತ್ತು ಎಂದರೆ ಸರಿ. ಭೂ ಪರಿವರ್ತನೆ ಹಾಗೂ ಲೇ ಔಟ್ ಪ್ಲಾನ್ ಅನ್ನು **2** ನೇ ಪ್ರತಿವಾದಿ ಮಾಡಿಸಿಕೊಂಡಿದ್ದರು ಎಂದರೆ ಸುಳ್ಳು ಎಂದು ಸಾಕ್ಷಿ ನುಡಿಯುತ್ತಾರೆ.

ದಿಃ 01.04.1993 ರಲ್ಲಿ ಕ್ರಯದ ಕರಾರು ಮತ್ತು ಅಧಿಕಾರ ಪತ್ರ ಮಾಡಿದ್ದು ಅಧಿಕಾರ ಪತ್ರದ ಆಧಾರದಲ್ಲಿ 2 ನೇ ಪ್ರತಿವಾದಿ ಭೂ ಪರಿವರ್ತನೆ ಹಾಗೂ ಲೇ ಔಟ್ ಪ್ಲಾನ್ ಮಾಡಿಸಿದ್ದರು ಎಂದರೆ ಸಾಕ್ಷಿಯು ನಾವು ಯಾವುದೇ ದಾಖಲೆಗಳನ್ನು 2 ನೇ ಪ್ರತಿವಾದಿಗೆ ಮಾಡಿಕೊಟ್ಟಿರಲಿಲ್ಲ ಅವರು ಸೃಷ್ಟಿಸಿದ್ದರು ಎಂದು ನುಡಿಯುತ್ತಾರೆ. ಭೂ ಪರಿವರ್ತನೆ ಹಾಗೂ ಲೇ ಔಟ್ ಪ್ಲಾನ್ ಅನುಮೋದನೆ ಗೊಂಡ ನಂತರ ಮತ್ತು ಎಲ್ಲ ಕೆಲಸ ಆದ ನಂತರ ನಾವು 2 ನೇ ಪ್ರತಿವಾದಿಗೆ ತೊಂದರೆ ಕೊಡುತ್ತಿದ್ದೇವೆ ಎಂದರೆ ಸುಳ್ಳು ಎಂದು ಸಾಕ್ಷಿ ನುಡಿಯುತ್ತಾರೆ.

ಕ್ರಯ ಪತ್ರ ವಾದ ನಂತರ Edulink Pvt. Ltd., ಹೆಸರಿನಲಲ್ಲಿ ಸಂಬಂದಪಟ್ಟ ಗ್ರಾಮ ಪಂಚಾಯಿತಿಯಲ್ಲಿ ದಾವಾ ಸ್ವತ್ತಿನ ಬಗ್ಗೆ ಖಾತೆ ಆಗಿತ್ತು ಎಂದರೆ ಅದು ಸೃಷ್ಟಿ ಮಾಡಿದ ದಾಖಲೆ ಎಂದು ಸಾಕ್ಷಿ ನುಡಿಯುತ್ತಾರೆ. ಖಾತೆ ಆದ ಅದೇಶದ ವಿರುದ್ಧ ನಾನು ಮೇಲ್ಮನವಿ ಸಲ್ಲಿಸಿದ್ದೆ ಎಂದರೆ ಸರಿ. ಸದರಿ ಮೇಲ್ಮನವಿಯಲ್ಲಿ ನನ್ನ ಪರವಾಗಿ ಆದೇಶ ಆಗಿತ್ತಾರ ಎಂದರೆ ಸಾಕ್ಷಿಯು ಸಿವಿಲ್ ನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇರುವ ಕಾರಣ ಅಲ್ಲೇ ಇತ್ಯರ್ಥ ಮಾಡಿಕೊಳ್ಳಿ ಎಂದು ಆದೇಶ ವಾಗಿತ್ತು ಎಂದು ನುಡಿಯುತ್ತಾರೆ. ನಾನು ಸಲ್ಲಿಸಿದ್ದ ಮೇಲ್ಮನವಿ ವಜಾ ಗೊಂಡಿತ್ತು ಎಂದರೆ ಸುಳ್ಳು ಎಂದು ಸಾಕ್ಷಿ ನುಡಿಯುತ್ತಾರೆ. ದಾವಾ ಸ್ವತ್ತುಗಳನ್ನು ಬಿಟ್ಟರೆ ನನಗೆ ಬೇರೆ ಎಷ್ಟು ಆಸ್ತಿಗಳು ಇವೆ ಎಂದು ಅಂದಾಜು 40 ಐಟಂ ಗಳಿವೆ ಎಂದು ಸಾಕ್ಷಿ ನುಡಿಯುತ್ತಾರೆ. ನನಗೆ ಜಮೀನು ವ್ಯವಹಾರ ಬಗ್ಗೆ ಒಳ್ಳೆಯ ತಿಳುವಳಿಕೆ ಇದೆ ಎಂದರೆ ಸಾಧಾರಣವಾಗಿದೆ ಎಂದು ನುಡಿಯುತ್ತಾರೆ. 40 ಐಟಂ ಆಸ್ತಿಗಳ ಬಗ್ಗೆ ನ್ಯಾಯಾಲಯಗಳಲ್ಲಿ 34

ಪ್ರಕರಣಗಳು ಇದ್ದು ನಾನು ಯಾವುದನ್ನು ಹಾಕಿಲ್ಲ ಎಲ್ಲಾ ನನ್ನ ವಿರುದ್ಧ ಸಲ್ಲಿಸಿದ್ದಾರೆ ಎಂದು ಸಾಕ್ಷಿ ನುಡಿಯುತ್ತಾರೆ. **1993** ರಿಂದ **2002** ರ ವರೆಗೆ ದಾವಾ ಸ್ವತ್ತಿನ ಬೆಲೆ ಏರುತ್ತಾ ಹೋಗಿತ್ತು ಎಂದರೆ ಸರಿ. ಭೂ ಪರಿವರ್ತನೆ ಆದ ನಂತರ ಮತ್ತು ಲೇ ಔಟ್ ಪ್ಲಾನ್ ಅನುಮೋದನೆ ಗೊಂಡ ನಂತರ ಆಸ್ತಿ ಬೆಲೆ ಹೆಚ್ಚಾಗುತ್ತದೆ ಎಂದರೆ ಸರಿ.

ಮುಂದುವರಿದ ಪಾಟೀ ಸವಾಲು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಅನುಪಮ ಲಕ್ಷ್ಮಿ.ಬಿ)
ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಮ್.ಎಫ್.ಸಿ.,
ರಾಮನಗರ.